# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 980 |
| 2) | ಮಾನ್ಯ ಸದಸ್ಯರ ಹೆಸರು | ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| 3) | ಉತ್ತರಿಸಬೇಕಾದ ದಿನಾಂಕ | 14/03/2025 |
| 4) | ಉತ್ತರಿಸುವವರು | ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು. |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪಂಚ ಗ್ಯಾರಂಟಿಗಳಲ್ಲಿ ಒಂದಾದ ಯುವನಿಧಿ ಗ್ಯಾರಂಟಿ ಯೋಜನೆಯಡಿಯಲ್ಲಿ ಇರುವ ಫಲಾನುಭವಿಗಳ ಸಂಖ್ಯೆ ಎಷ್ಟು; | ಯುವನಿಧಿ ಯೋಜನೆ ಅಡಿ ಜನವರಿ-2025 ರ ಅಂತ್ಯಕ್ಕೆ ಒಟ್ಟು 1,74,170 ಫಲಾನುಭವಿಗಳು ನಿರುದ್ಯೋಗ ಭತ್ಯೆ ಪಡೆದಿರುತ್ತಾರೆ. |
| ಆ) | ಇವರಿಗೆ ಉದ್ಯೋಗಾವಕಾಶ ಒದಗಿಸಲು ಸರ್ಕಾರ ಹಾಕಿಕೊಂಡಿರುವ ಯೋಜನೆಗಳೇನು; | 2024-25ನೇ ಸಾಲಿನ ಆಯವ್ಯಯ ಕಂಡಿಕೆ 213 ರಲ್ಲಿ ಯುವನಿಧಿ ಪ್ಲಸ್ ಉಪಕ್ರಮದಡಿ ಕೌಶಲ್ಯಾಭಿವೃದ್ಧಿ ಇಲಾಖೆಯಲ್ಲಿ ನೀಡುತ್ತಿರುವ ಕೋರ್ಸ್‌ಗಳಲ್ಲಿ ವಿಷಯಾಧಾರಿತ ಉದ್ಯಮಶೀಲತಾ ಅಭಿವೃದ್ಧಿ ತರಬೇತಿಯನ್ನು 25,000 ಯುವನಿಧಿ ಫಲಾನುಭವಿಗಳಿಗೆ ನೀಡಲಾಗುವುದು, ಯುವ ಜನರ ಕೌಶಲ್ಯಾಭಿವೃದ್ಧಿಗೆ ಉತ್ತೇಜನ ನೀಡುವುದರೊಂದಿಗೆ ಉದ್ಯೋಗಾಕಾಂಕ್ಷಿಗಳನ್ನು ಮತ್ತು ಉದ್ಯೋಗದಾತರನ್ನು ಒಂದೇ ವೇದಿಕೆಯಡಿ ತರುವ ಮೂಲಕ ಯುವ ಸಮೃದ್ಧಿ ಉದ್ಯೋಗ ಮೇಳವನ್ನು ರಾಜ್ಯದ ವಿವಿಧ ಭಾಗಗಳಲ್ಲಿ ಆಯೋಜಿಸಲಾಗುವುದು ಎಂದು ಘೋಷಿಸಲಾಗಿರುತ್ತದೆ. |
| ಇ) | ನಿರುದ್ಯೋಗಿ ಯುವಕರ ಕೌಶಲ್ಯಾಭಿವೃದ್ಧಿಗೆ ಹಾಕಿಕೊಂಡಿರುವ ಕಾರ್ಯಕ್ರಮಗಳೇನು; | 1. ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸಲಾಗುತ್ತಿರುವ ಯೋಜನೆ / ಕಾರ್ಯಕ್ರಮಗಳ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.<br><br>2. ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ವತಿಯಿಂದ ಅರ್ಹ ಗ್ರಾಮೀಣ ಕುಟುಂಬಗಳ ನಿರುದ್ಯೋಗಿ ಯುವಕ-ಯುವತಿಯರನ್ನು ಗುರುತಿಸಿ ಅವಶ್ಯಕ ಕೌಶಲ್ಯ ತರಬೇತಿಗಳನ್ನು ಒದಗಿಸಿ ಉದ್ಯೋಗ ಒದಗಿಸಲು ಈ ಕೆಳಗಿನ ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ಅನುಷ್ಠಾನಗೊಳಿಸಲಾಗುತ್ತಿದೆ.<br>• ದೀನ್ ದಯಾಳ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ (DDU-GKY)<br>• ಗ್ರಾಮೀಣ ಸ್ವ ಉದ್ಯೋಗ ತರಬೇತಿ ಕೇಂದ್ರ ಯೋಜನೆ (RSETI) |

--2

| | | |
|---|---|---|
| ಈ) | ಉದ್ಯೋಗಾವಕಾಶ ಒದಗಿಸಲು ಹಾಗೂ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳಿಗೆ ಅನುದಾನ ಒದಗಿಸಲಾಗಿದೆಯೇ? | ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ: ಸರ್ಕಾರದ ಕ್ರಿಯಾ ಯೋಜನೆಯಡಿ ಉದ್ಯೋಗಾವಕಾಶ ಒದಗಿಸಲು ಹಾಗೂ ಕೌಶಲ್ಯಾಭಿವೃದ್ಧಿ ಯೋಜನೆಗಳಡಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಅನುದಾನವನ್ನು ಒದಗಿಸಲಾಗುತ್ತಿದೆ.<br><br>ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್: ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ (DDU-GKY) ಶೇ. 60% ಕೇಂದ್ರ ಹಾಗೂ ಶೇ. 40% ರಾಜ್ಯ ಸರ್ಕಾರದ ಅನುದಾನದಡಿ ಮತ್ತು ಗ್ರಾಮೀಣ ಸ್ವ ಉದ್ಯೋಗ ತರಬೇತಿ ಕೇಂದ್ರ ಯೋಜನೆ (RSETI)ಯನ್ನು ಶೇ. 100 ರಷ್ಟು ಕೇಂದ್ರ ಸರ್ಕಾರದ ಅನುಪಾತದಲ್ಲಿ ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.<br><br>ಪ್ರತಿ ವರ್ಷ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದಿಂದ ಅನುಮೋದಿತ ಕ್ರಿಯಾಯೋಜನೆಯಂತೆ ನಿಗದಿಪಡಿಸಲಾದ ಗುರಿಗಳ ಪ್ರಗತಿಗನುಗುಣವಾಗಿ ಅನುದಾನ ಲಭ್ಯತೆಗನುಗುಣವಾಗಿ ಕೌಶಲ್ಯಾಭಿವೃದ್ಧಿ ತರಬೇತಿ ಒದಗಿಸಿ ಉದ್ಯೋಗಾವಕಾಶ ಕಲ್ಪಿಸಲು ಜಿಲ್ಲೆ ಮತ್ತು ಕಾರ್ಯಕ್ರಮ ಅನುಷ್ಠಾನ ಸಂಸ್ಥೆಗಳಿಗೆ ಅನುದಾನ ಒದಗಿಸಲಾಗಿದೆ. |

ಸಂಖ್ಯೆ: ಕೌಉಜೀಇ 40 ಕೃತಪ್ರ 2025

(ಡಾ. ಶರಣಪ್ರಕಾಶ ಆರ್ ಪಾಟೀಲ್)
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.

# ಅನುಬಂಧ -1

## ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದಿಂದ ನೀಡಲಾಗಿರುವ ತರಬೇತಿ ಕಾರ್ಯಕ್ರಮ ಹಾಗೂ ಯೋಜನೆಗಳ ವಿವರ

### ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ :

ಕರ್ನಾಟಕ ರಾಜ್ಯದ ಯುವಕರಿಗೆ ಪ್ರಮಾಣಪತ್ರ ಆಧಾರಿತ ಕೌಶಲ್ಯ ತರಬೇತಿಯನ್ನು ನೀಡುವುದು ಮತ್ತು ಅವರನ್ನು ಉದ್ಯಮಶೀಲನ್ನಾಗಿಸುವ ಮತ್ತು ಸ್ವಯಂ-ಉದ್ಯೋಗ-ಸಿದ್ಧಪಡಿಸಲು ಉತ್ತಮ ಕೌಶಲ್ಯಗಳೊಂದಿಗೆ ಅವರನ್ನು ಸಜ್ಜುಗೊಳಿಸುವುದು ಯೋಜನೆಯ ಮುಖ್ಯ ಉದ್ದೇಶವಾಗಿದೆ. ಇದುವರೆವಿಗೂ 3,07,393 ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗಿದೆ.

ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ ಇತರೆ **ಕಾರ್ಯಕ್ರ**ಮಗಳು :-

1. ಇಂಡ್ರುಸ್ಟ್ರೀ ಲಿಂಕೆಜ್ ಸೆಲ್
2. ಕೌಶಲ್ಯ ತರಬೇತಿ ಪಾಲುದಾರರ ಸಂಸ್ಥೆ / ಕೇಂದ್ರಗಳ ಮೂಲಕ ಕೌಶಲ್ಯ ತರಬೇತಿ

1. **ಇಂಡಸ್ಟ್ರೀ ಲಿಂಕೆಜ್ ಸೆಲ್ (ILC):**

ಸಿ.ಎಂ.ಕೆ.ಕೆ.ವೈ. ಯೋಜನೆಯಡಿಯಲ್ಲಿ ಇಂಡಸ್ಟ್ರಿ ಲಿಂಕೇಜ್ ಸೆಲ್ (ILC) & FutureSkills ಕಾರ್ಯಕ್ರಮದಡಿ ಅಂತರಾಷ್ಟ್ರೀಯ, ದೇಶೀಯ ಮತ್ತು ಸ್ಥಳೀಯ ಕೈಗಾರಿಕೆಗಳು ಮತ್ತು ತರಬೇತಿ ಕೇಂದ್ರಗಳನ್ನು ಹೊಂದಿರುವ ಬ್ಲೂ ಚಿಪ್ ಕಂಪನಿಗಳ ಸಹಯೋಗದೊಂದಿಗೆ ಉದ್ಯಮದ ಪ್ರಸ್ತುತ ಮಾರುಕಟ್ಟೆ ಬೇಡಿಕೆಗಳಿಗೆ ಅನುಗುಣವಾಗಿ ಕೌಶಲ್ಯ ತರಬೇತಿಯನ್ನು ಒದಗಿಸುವುದರೊಂದಿಗೆ ಉದ್ಯೋಗಾವಕಾಶ ಕಲ್ಪಿಸಲು ಕಾರ್ಯಕ್ರಮವನ್ನು ರೂಪಿಸಲಾಗಿದ್ದು, ರಾಜ್ಯಾದ್ಯಂತ ILC ಅಡಿ 16 ಸಂಸ್ಥೆಗಳೊಂದಿಗೆ ಒಡಂಬಡಿಕೆ ಕೈಗೊಂಡು 1200 ಅಭ್ಯಿಗಳಿಗೆ ತರಬೇತಿ ಕಾರ್ಯಕ್ರಮವನ್ನು ಹಾಗೂ FutureSkills ಕಾರ್ಯಕ್ರಮದಡಿ 9 ಸಂಸ್ಥೆಗಳೊಂದಿಗೆ ಒಡಂಬಡಿಕೆ ಕೈಗೊಂಡು 750 ಅಭ್ಯಿಗಳಿಗೆ ತರಬೇತಿ ಕರ್ಯಕ್ರಮವನ್ನು ಪ್ರಾರಂಭಿಸಲಾಗಿದ್ದು, ತರಬೇತಿ ಕಾರ್ಯಕ್ರಮವು ಪ್ರಗತಿಯಲ್ಲಿರುತ್ತದೆ.

**2.ತರಬೇತಿ ಸಂಸ್ಥೆ / ಕೇಂದ್ರಗಳ ಮೂಲಕ ಕೌಶಲ್ಯಾಧಾರಿತ ತರಬೇತಿ ಕಾರ್ಯಕ್ರಮ :**

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮವು ಸರ್ಕಾರಿ ಮತ್ತು ಖಾಸಗಿ ವೃತ್ತಿಪರ ತರಬೇತಿ ಸಂಸ್ಥೆ / ಕೇಂದ್ರಗಳ ಸಹಯೋಗದೊಂದಿಗೆ ವಿವಿಧ ಕ್ಷೇತ್ರಗಳಲ್ಲಿ ಕೌಶಲ್ಯ ತರಬೇತಿಯನ್ನು ನೀಡುತ್ತದೆ. ಸರ್ಕಾರದ ಆದೇಶದಂತೆ ಸರ್ಕಾರಿ ತರಬೇತಿ ಸಂಸ್ಥೆಗಳಿಗೆ ಈಗಾಗಲೇ ಅನುದಾನವನ್ನು ಬಿಡುಗಡೆಗೊಳಿಸಲಾಗಿದ್ದು, ಖಾಸಗಿ ತರಬೇತಿ ಸಂಸ್ಥೆಗಳಿಗೆ ಕಾರ್ಯಾದೇಶವನ್ನು ನೀಡುವ ಕಾರ್ಯವು ಪ್ರಗತಿಯಲ್ಲಿರುತ್ತದೆ.

**3. ನಲ ಜಲ ಮಿತ್ರ :**

ಗ್ರಾಮೀಣ ಕುಡಿಯುವ ನೀರು ಸರಬರಾಜು ಉಪಕ್ರಮದಡಿ ಸಮರ್ಥ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಗ್ರಾಮಪಂಚಾಯಿತಿಗಳಿಂದ ಕೈಗೊಳ್ಳುವ ನಿಟ್ಟಿನಲ್ಲಿ ನುರಿತ ಉದ್ಯೋಗಿಗಳನ್ನು ರಚಿಸಲು ಭಾರತ ಸರ್ಕಾರವು ಜನಲ್ ಜೀವನ್ ಮಿಷನ್ ನ ಸಾರಥ್ಯದಲ್ಲಿ ಉಪ ಕ್ರಮವಾಗಿ ಜಾರಿಗೊಳಿಸಿದೆ.

NAL JAL ಮಿತ್ರ ತರಬೇತಿ ಉಪಕ್ರಮದ ಭಾಗವಾಗಿ, ರಾಜ್ಯದ 31 ಜಿಲ್ಲೆಗಳಾದ್ಯಂತ 5952 ಗ್ರಾಮ ಪಂಚಾಯತ್‌ಗಳಿಂದ (ರಾಷ್ಟ್ರೀಯ ಜೀವನೋಪಾಯ ಮಿಷನ್ ಅಡಿಯಲ್ಲಿ ನೋಂದಾಯಿಸಲಾದ ಸ್ವಸಹಾಯ ಗುಂಪುಗಳ ಮಹಿಳೆಯರು) 11904 ಅಭ್ಯರ್ಥಿಗಳಿಗೆ ಜಲ ವಿತರಣಾ ಸಂಚಾಲಕ್ ಎಂಬ ಕೋರ್ಸ್ ನಡಿ ತರಬೇತಿ ನೀಡಲಾಗುತ್ತದೆ. ಇದಲ್ಲದೆ, ಕಾರ್ಯಕ್ರಮದಡಿಯಲ್ಲಿ ಕೌಶಲ್ಯ ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಜಲ ಜೀವನ್ ಮಿಷನ್-ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಉಪಕ್ರಮದ ಭಾಗವಾಗಿ ಟೂಲ್‌ಕಿಟ್‌ಗಳನ್ನು ಒದಗಿಸಲಾಗುತ್ತಿದ್ದು, ತರಬೇತಿ ಪಡೆದ ಪ್ರಶಿಕ್ಷಣಾರ್ಥಿಗಳಿಗೆ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದಿಂದ ಟೂಲ್ಕಿಟ್ ಅನ್ನು ನೀಡಲಾಗುತ್ತದೆ.

ಪ್ರಸ್ತುತ ಮೊದಲನೇ ಹಂತದಲ್ಲಿ 6 ಜಿಲ್ಲೆಗಳಾದ ಮಂಡ್ಯ, ಹಾವೇರಿ, ದಾವಣಗೆರೆ, ಬೀದರ್, ಶಿವಮೊಗ್ಗ, ಮತ್ತು ಬೆಳಗಾವಿ ಜಿಲ್ಲೆಗಳ 281 ಮಹಿಳಾ ಅಭ್ಯರ್ಥಿಗಳಿಗೆ ತರಬೇತಿಯು ಮುಕ್ತಾಯಗೊಂಡಿದ್ದು, OJT ಅಡಿ ತರಬೇತಿಯನ್ನು ಮುನ್ನಡೆಸಲಾಗುತ್ತಿದೆ. ಅದರಂತೆ ಮುಂದುವರೆದು, ಜಿ.ಟಿ.ಟಿ.ಸಿ ಹಾಗೂ ಐ.ಟಿ.ಐ ಗಳ ಮೂಲಕ ತರಬೇತಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದ್ದು, ಅನುದಾನವನ್ನು ಗ್ರಾ.ಪಂ ರಾಜ್ ಇಲಾಖೆ ಹಾಗೂ ಐ.ಟಿ.ಐ ಉದ್ಯೋಗ ಸೊಸೈಟಿ ಕೈಗಾರಿಕೆ ತರಬೇತಿ ಮತ್ತು ಉದ್ಯೋಗ ಇಲಾಖೆಯಿಂದ ಪಡೆಯಲಾಗಿರುತ್ತದೆ.

**4. ಸ್ಕಿಲ್ ಕನೆಕ್ಟ್ ಪೋರ್ಟಲ್**

ಕನೆಕ್ಟ್ ಪೋರ್ಟಲ್ ಪ್ರತಿಭಾವಂತ ಉದ್ಯೋಗಾಕಾಂಕ್ಷಿಗಳ ವ್ಯಾಪಕ ವ್ಯವಸ್ಥೆಯ ಏಕೀಕೃತ ಪರಿಹಾರವನ್ನು ನೀಡಲು ಸ್ಥಾಪಿಸಲಾಗಿದ್ದು, ಅಭ್ಯರ್ಥಿಗಳ ಪ್ರತಿಭಾ ಸಂಪಾದನೆ ಮತ್ತು ನೇಮಕಾತಿಗಾಗಿ ಒಂದೇ ಪರಿಹಾರ ಒದಗಿಸುವುದರೊಂದಿಗೆ ಬಳಕೆದಾರ ಸ್ನೇಹಿ ಇಂಟರ್ ಫೇಸ್, ಕಸ್ಟಮೈಸ್ ಮಾಡಿದ ಉದ್ಯೋಗ, ಇನ್‌ಟರ್ನ್ ಶಿಪ್ ಮತ್ತು ಅಪ್ರೆಂಟಿಸ್‌ಶಿಪ್ ಪೋಸ್ಟಿಂಗ್‌ಗಳು, ಕೌಶಲ್ಯ ಮೌಲ್ಯಮಾಪನ ಪರಿಕರಗಳು, ಅರ್ಜಿದಾರರೊಂದಿಗೆ ನೇರ ಸಂವಹನದಿಂದ ಪ್ರಯೋಜನ ಪಡೆಯುವುದಾಗಿದೆ. ನೇಮಕಾತಿಯ ದಕ್ಷತೆಯನ್ನು ಹೆಚ್ಚಿಸುವಲ್ಲಿ ಆನ್‌ಲೈನ್ ಸಂದರ್ಶನದ ವೇಳಾಪಟ್ಟಿಯ ವೈಶಿಷ್ಟ್ಯವೂ ಸದರಿ ಪೋರ್ಟಲ್ ನಡಿ ಇದ್ದು, ಶೈಕ್ಷಣಿಕ ಸಂಸ್ಥೆಗಳು ಮತ್ತು ಮಾರ್ಗದರ್ಶನ ಸಹಕರಿಸುವ ಅವಕಾಶ ಒದಗಿಸಿದೆ. ಉದ್ಯೋಗ ಆಕಾಂಕ್ಷಿಗಳು ಪೋರ್ಟಲ್ ನಡಿ ಲಭ್ಯವಿರುವ ಇ-ಕೌಶಲ್ಯ (ಕಲಿಕೆ ನಿರ್ವಹಣಾ ವ್ಯವಸ್ಥೆ) ಯಲ್ಲಿ 10000+ ಕ್ಕೂ ಹೆಚ್ಚು ಕೋರ್ಸ್‌ಗಳಡಿ ಕೌಶಲ್ಯವನ್ನು ಹೆಚ್ಚಿಸುವ ಎಲ್ಲಾ ವಲಯಗಳ ಉದ್ಯೋಗಗಳಿಗೆ ಅರ್ಜಿ ಸಲ್ಲಿಸಬಹುದು. ಅಭ್ಯರ್ಥಿಗಳು ಸೈಕೋಮೆಟ್ರಿಕ್ ಮತ್ತು ತಾಂತ್ರಿಕ ಮೌಲ್ಯಮಾಪನಗಳನ್ನು ಸಹ ತೆಗೆದುಕೊಳ್ಳಬಹುದು.

ಆಕಾಂಕ್ಷಿಗಳು ಉದ್ಯೋಗಗಳು, ಇಂಟರ್ನ್ ಶಿಪ್ ಮತ್ತು ಅಪ್ರೆಂಟಿಸ್‌ಶಿಪ್‌ಗಳಿಗೆ ಅರ್ಜಿಗಳನ್ನು ಸಲ್ಲಿಸಬಹುದು. ಕಂಪನಿಗಳು ತಮ್ಮ ನೇಮಕಾತಿ ಅಗತ್ಯಗಳನ್ನು ಪೂರ್ಣವಾಗಿ ತುಂಬಲು ಪೋರ್ಟಲ್ ನಲ್ಲಿ ನುರಿತ ಯುವಕರ ನೋಂದಣಿಯ ವ್ಯಾಪಕ ವ್ಯವಸ್ಥೆಯ ಪ್ರಯೋಜನ ಪಡೆಯಬಹುದು. ಶೈಕ್ಷಣಿಕ ಸಂಸ್ಥೆಗಳು ವಿವಿಧ ಕಂಪನಿಗಳ ಮಾನವ ಸಂಪನ್ಮೂಲ ವೃತ್ತಿಪರರೊಂದಿಗೆ ಸಹಕರಿಸಬಹುದು ಮತ್ತು ತಮ್ಮ ಸಂಸ್ಥೆಗಳನ್ನು ಉದ್ಯೋಗ ಆಕಾಂಕ್ಷಿಗಳಾಗಿ ಇರಿಸಬಹುದು. ಸ್ಕಿಲ್ ಕನೆಕ್ಟ್ ಪೋರ್ಟಲ್ ಕುರಿತು ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು https://skillconnect.kaushalkar.com/ ಲಿಂಕ್‌ಗೆ ಭೇಟಿ ನೀಡಬಹುದಾಗಿದೆ.

**5. ಯುವ ನಿಧಿ ಪ್ಲಸ್** : ಯುವನಿಧಿ ಯೋಜನೆಯಡಿ ನೊಂದಣಿಗೊಂಡ ಅಭ್ಯರ್ಥಿಗಳಿಗೆ ಕೌಶಲ್ಯಾಧಾರಿತ ತರಬೇತಿಯೊಂದಿಗೆ ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ILC ಹಾಗೂ Future Skills ನಡಿ ತರಬೇತಿ ನೀಡಲು ಕ್ರಮವಹಿಸಲಾಗಿರುತ್ತದೆ. ಅದರಂತೆ ಸರ್ಕಾರಿ ಸಂಸ್ಥೆಗಳಾದ ಜಿ.ಟಿ.ಟಿ.ಸಿ ಕೆ.ಜಿ.ಟಿ.ಟಿ.ಐ ಹಾಗೂ ಸಿಡಾಕ್ ಮತ್ತು ಮೋಕ್ಷಗುಂಡಂ ವಿಶ್ವೇಶ್ವರಯ್ಯ ತರಬೇತಿ ಕೇಂದ್ರಗಳ ಮೂಲಕವು ಸಹ ತರಬೇತಿಯನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗಿದೆ.

**6. ಉದ್ಯೋಗ ಮೇಳ :**

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮವು ಕರ್ನಾಟಕ ರಾಜ್ಯದಾದ್ಯಂತ ಉದ್ಯೋಗ ಮೇಳಗಳನ್ನು ನಡೆಸುತ್ತಿದೆ, ಈ ಮೂಲಕ ಉದ್ಯೋಗಾಕಾಂಕ್ಷಿಗಳು ಮತ್ತು ಉದ್ಯೋಗದಾತರಿಗೆ ಒಂದೇ ವೇದಿಕೆ ಅಡಿ ಸಂವಾದಿಸಲು ಮತ್ತು ಹೊಸ ವೃತ್ತಿ ಜೀವನವನ್ನು ಪ್ರಾರಂಭಿಸಲು ಅವಕಾಶ ಒದಗಿಸುತ್ತದೆ. ಈ ಉದ್ಯೋಗ ಮೇಳಗಳು ಉದ್ಯೋಗಾಕಾಂಕ್ಷಿಗಳಿಗೆ ತಮ್ಮ ತಮ್ಮ ಜಿಲ್ಲೆಗಳಲ್ಲಿ ಸ್ಥಳೀಯವಾಗಿ ಇರುವ ಕೈಗಾರಿಕೆಗಳಲ್ಲಿ ಹಾಗೂ ರಾಜ್ಯ ಮತ್ತು ದೇಶದಾದ್ಯಂತ ಮಾರುಕಟ್ಟೆ ಬೇಡಿಕೆಗನುಗುಣವಾಗಿ ಉದ್ಯೋಗವಕಾಶ ಪಡೆಯಲು ಅವಕಾಶಗಳನ್ನು ಒದಗಿಸುತ್ತವೆ.

**7. ಅಂತರಾಷ್ಟ್ರೀಯ ವಲಸಿಗರ ಕೇಂದ್ರ – ಕರ್ನಾಟಕ (ವಿದೇಶಿ ಉದ್ಯೋಗಾವಕಾಶ) :**

ಅಂತರಾಷ್ಟ್ರೀಯ ವಲಸೆ ಕೇಂದ್ರ ಕರ್ನಾಟಕ (IMCK) ಯ ಸಾಗರೋತ್ತರ ನೇಮಕಾತಿ ವಿಭಾಗವಾಗಿದ್ದು, ಇದು ಕರ್ನಾಟಕ ಯುವಕರಿಗೆ ಇತರ ದೇಶಗಳಲ್ಲಿ ಕೆಲಸ ಮಾಡಲು ಅವಕಾಶಗಳನ್ನು ಒದಗಿಸುತ್ತದೆ. IMCK ಕರ್ನಾಟಕದಿಂದ ಜಾಗತಿಕ ಮಾರುಕಟ್ಟೆಗೆ ತರಬೇತಿ ಪಡೆದ ಮತ್ತು ಪ್ರಮಾಣೀಕೃತ ಕೆಲಸಗಾರರನ್ನು ಒದಗಿಸುವ ಮೂಲಕ ಸಾಗರೋತ್ತರ ಕಂಪನಿಗಳ ನೇಮಕಾತಿ ಬೇಡಿಕೆಯನ್ನು ಪೂರೈಸುತ್ತದೆ.

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ (ಕೆಎಸ್‌ಡಿಸಿ) ಅನ್ನು ರಾಜ್ಯ ಸರ್ಕಾರ ನಡೆಸುವ ನೇಮಕಾತಿ ಏಜೆನ್ಸಿ (ಆರ್‌ಎ-ಕೆ) ಆಗಿ ವಲಸೆಗಾರರ ಪ್ರೊಟೆಕ್ಟರ್ ಜನರಲ್, ವಿದೇಶಾಂಗ ಮಂತ್ರಾಲಯ (ಎಂಇಎ) ಮತ್ತು ಭಾರತ ಸರ್ಕಾರದಿಂದ ನೋಂದಾಯಿಸಲಾಗಿದೆ.

IMCK ಯಿಂದ ಒಂದು ಕಡೆ ವಿದೇಶಿ ಉದ್ಯೋಗಾವಕಾಶಗಳ ಬೇಡಿಕೆಯನ್ನು ವಿವಿಧ ದೇಶಗಳಿಂದ ತರುವುದರೊಂದಿಗೆ ಅಭ್ಯರ್ಥಿಗಳನ್ನು ಸಜ್ಜುಗೊಳಿಸಿ, ಸುರಕ್ಷಿತ ಪಾಸ್ ಪೋರ್ಟ್ ವೀಸಾಗಳನ್ನು ಪಡೆಯಲು ಅನುಕೂಲ ಮಾಡುತ್ತೇವೆ ಮತ್ತು ನಿರ್ಗಮನ ಪೂರ್ವ ತರಬೇತಿಯನ್ನು (PDOT) ಒದಗಿಸುತ್ತೇವೆ. ಅಲ್ಲದೆ, IMC-K, KSDC ಮೂಲಕ ನೇಮಕಗೊಳ್ಳುವ ಅಭ್ಯರ್ಥಿಗಳ ಒಟ್ಟಾರೆ ಸುರಕ್ಷತೆಗೆ ಅನುಕೂಲವಾಗುತ್ತದೆ. ಇದುವರೆವಿಗೂ **911** ಮಹಿಳೆಯರಿಗೆ ವಿದೇಶಿ ಉದ್ಯೋಗವಕಾಶ ಕಲ್ಪಿಸಲಾಗಿದೆ.

Padma. S

(ಪದ್ಮ ಎಸ್)

ಸರ್ಕಾರದ ಅಧೀನ ಕಾರ್ಯದರ್ಶಿ,

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು

ಜೀವನೋಪಾಯ ಇಲಾಖೆ.